



3




4





5

ನೇಮ್ ಪ್ಲೇಟ್, ಉಪ್ಪಿನ ಪಾತ್ರೆ, ಹಾಲು– ಮೊಸರು ಸಂಗ್ರಹ ಪಾತ್ರೆ, ವ್ಯಾನಿಟಿ ಬ್ಯಾಗ್, ಪರ್ಸ್, ಪೆನ್ ಸ್ಟ್ಯಾಂಡ್, ಪೆನ್ನುಗಳು, ಬ್ಯಾಗ್, ಸೋಪ್ ಸ್ಟ್ಯಾಂಡ್, ವಿದ್ಯುದ್ದೀಪ, ಕಂದೀಲು, ಮೊಬೈಲ್ ಪಾಕೆಟ್, ಬಟ್ಟಲು, ಕಪ್, ಉಪ್ಪಿನಕಾಯಿ ಪಾತ್ರೆ, ಆಲಂಕಾರಿಕ ದೀಪದ ಸ್ಟ್ಯಾಂಡ್, ಲೆಟರ್ ಸ್ಟ್ಯಾಂಡ್...

ಕೋವಲಂ ಕಡಲತಡಿಯನ್ನು ಕೇಂದ್ರವಾಗಿಟ್ಟುಕೊಂಡು, ಇಲ್ಲೇ ಉತ್ಪಾದನೆ ಹಾಗೂ ಮಾರಾಟದ ಮಳಿಗೆಯನ್ನು ಆರಂಭಿಸಲಾಗಿತ್ತು. ವ್ಯರ್ಥ ಸಾಮಗ್ರಿಗಳ ಮರುಬಳಕೆ ಕುರಿತು ಜನರಿಗೆ ಮತ್ತು ಪ್ರವಾಸಿಗರಿಗೆ ಅರಿವು ಮೂಡಿಸುವ ಉದ್ದೇಶ ಇದರ ಹಿಂದಿದ್ದು, ಉತ್ಪನ್ನಗಳ ಮಾರಾಟದ ಮಳಿಗೆಯೂ ಇಲ್ಲಿತ್ತು. ಅಂದದ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾದಾಗ, ತಿರುವನಂತಪುರದಲ್ಲೇ ಈಗ ಸಣ್ಣ ಯಂತ್ರಾಗಾರ ಹಾಗೂ ಸುಸಜ್ಜಿತ ಮಾರಾಟ ಮಳಿಗೆಯನ್ನು ಸ್ಥಾಪಿಸಲಾಗಿದೆ. 'ಈಗಂತೂ ಜನಪದ ಮೇಳ, ಕರಕುಶಲ ವಸ್ತು ಪ್ರದರ್ಶನ–ಗಳಲ್ಲಿ ಪಾಲ್ಗೊಳ್ಳಲು ದೇಶದಾದ್ಯಂತ ಆಹ್ವಾನ ಬರುತ್ತಿದೆ. ಅಲ್ಲಿ ಈ ಸಾಮಗ್ರಿಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ. ಪರಿಸರ ಸಂರಕ್ಷಣೆ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿದೆ. ಇದೂ ಇಂಥ ಉತ್ಪನ್ನಗಳ ಬೇಡಿಕೆ ಹೆಚ್ಚಲು ಕಾರಣ–ವಾಗಿದೆ ಎಂದು 'ಥನಲ್ಲ ಕಾರ್ಯನಿರ್ವಾಹಕ ನಿರ್ದೇಶಕಿ ಉಷಾಕುಮಾರಿ ಎಸ್. ವಿಶ್ಲೇಷಿಸುತ್ತಾರೆ.

ನಿರುಪಯುಕ್ತ ಪದಾರ್ಥಗಳ ಮರುಬಳಕೆಯಿಂದ ಪರಿಸರ ಸಂರಕ್ಷಣೆ ಹೇಗೆ ಮಾಡಬಹುದು ಎಂಬ ಕುರಿತು ಝೀರೊ ವೇಸ್ಟ್ ಸೆಂಟರ್ನಲ್ಲಿ ಆಗಾಗ್ಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಉತ್ಪನ್ನ–ಗಳ ಸ್ವರೂಪ ಹೆಚ್ಚುತ್ತಲೇ ಇವೆ. ಇವು ಪ್ರವಾಸಿಗರನ್ನು ಸೆಳೆಯುವುದರೊಂದಿಗೆ, ಖುದ್ದಾಗಿ ಅಂಥ ಸಾಮಗ್ರಿಗಳನ್ನು ತಯಾರಿಸುವ ಉತ್ಸಾಹವನ್ನು ಸಹ ಮೂಡಿಸುತ್ತವೆ.

ಹಾಗೆ ನೋಡಿದರೆ, ಪ್ರಕೃತಿಯಲ್ಲಿ ನಿರುಪಯುಕ್ತ ಎಂಬುದೇ ಇಲ್ಲ. ಸ್ವರೂಪ ಮಾತ್ರ ಬದಲಾಗುತ್ತಷ್ಟೇ. ಆ ಪ್ರಕ್ರಿಯೆಯನ್ನು ನಾವು ಹುಡುಕಿಕೊಳ್ಳಬೇಕು. ನಮ್ಮ ಪರಿಸರವನ್ನು ತಿಪ್ಪೆಗುಂಡಿಯಂತೆ ಮಾಡದೇ ಇರಲು ಇದು ಅನಿವಾರ್ಯ ಎನ್ನುತ್ತಾರೆ ಶ್ರೀಧರ್.

ಯಾವುದೇ ವಸ್ತುವನ್ನು ಎಸೆಯುವ ಮೊದಲು ಅದನ್ನು ಇನ್ನೂ ಹೇಗೆ ಬಳಕೆ ಮಾಡಿಕೊಳ್ಳಬಹುದು ಎಂಬ ಚಿಂತನೆಯನ್ನು ಉದ್ದೀಪಿಸುವ ಝೀರೊ ವೇಸ್ಟ್ ಸೆಂಟರ್, ಪರಿಸರ ಆಸಕ್ತರಿಗೆ ಕಡ್ಡಾಯ ಭೇಟಿ ತಾಣ ಎಂಬಂತಾಗಿದೆ.